# 21,794 ಮಂದಿಗೆ ಸೋಂಕು

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ಹೊಸ ಪ್ರಕರಣಗಳು ಬರೋಬ್ಬರಿ ಇಪ್ಪತ್ತು ಸಾವಿರ ಗಡಿದಾಟಿವೆ.

ಮಂಗಳವಾರ 21,794 ಮಂದಿಗೆ ಸೋಂಕು ತಗುಲಿದ್ದು 149 ಸೋಂಕಿತರು ಮೃತಪಟ್ಟಿದ್ದಾರೆ. ಈ ಪೈಕಿ ಬೆಂಗಳೂರು ಒಂದರಲ್ಲಿಯೇ 13,782 ಮಂದಿಗೆ ಸೋಂಕು ತಗುಲಿದ್ದು 92 ಸೋಂಕಿತರು ಚಿಕಿತ್ಸೆ ಫಲಕಾರಿಯಾಗದೇ ಜೀವಕಳೆದುಕೊಂಡಿದ್ದಾರೆ.

19 ಸಾವಿರಕ್ಕೆ ಹೆಚ್ಚಳವಾಗಿದ್ದ ಹೊಸ ಪ್ರಕರಣಗಳು ಸೋಮವಾರ 15 ಸಾವಿರಕ್ಕೆ ಇಳಿಕೆಯಾಗಿದ್ದವು. ಆದರೆ, ಮಂಗಳವಾರ ಪರೀಕ್ಷೆ ಪ್ರಮಾಣ ತುಸು (1.47 ಲಕ್ಷಕ್ಕೆ) ಹೆಚ್ಚಳವಾದ ಹಿನ್ನೆಲೆ ಪ್ರಕರಣಗಳು 21 ಸಾವಿರಕ್ಕೆ ತಲುಪಿವೆ. ಸಾವು ಕೂಡ ಏರಿಕೆ ಹಾದಿ ಮುಂದುವರಿಸಿರುವುದು ಆತಂಕ ಮೂಡಿಸಿದೆ. ಸೋಂಕು ಪರೀಕ್ಷೆಗಳ ಪಾಸಿಟಿವಿಟಿ ದರ ಶೇ.2ರಷ್ಟು ಹೆಚ್ಚಳವಾಗಿದ್ದು, ಶೇ.15 ದಾಖಲಾಗಿದೆ. ಅಂದರೆ, ಸೋಂಕು ಪರೀಕ್ಷೆಗೊಳಪಟ್ಟ 100 ಮಂದಿಯಲ್ಲಿ 15 ಮಂದಿಯಲ್ಲಿ ಸೋಂಕು ದೃಢಪಡುತ್ತಿದೆ.



ರಾಜ್ಯದ ಒಟ್ಟಾರೆ ಪ್ರಕರಣಗಳು 12,ಲಕ್ಷಕ್ಕೆ ಸಮೀಪಿಸಿದ್ದು ಈ ಪೈಕಿ 10.25 ಲಕ್ಷ ಮಂದಿ ಗುಣಮುಖರಾಗಿದ್ದಾರೆ. ಸಕ್ರಿಯ ಪ್ರಕರಣಗಳು 1.59 ಲಕ್ಷಕ್ಕೆ ಹೆಚ್ಚಳವಾಗಿದ್ದು ಈ ಪೈಕಿ 751 ಮಂದಿ ಆರೋಗ್ಯ ಸ್ಥಿತಿ ಗಂಭೀರವಾಗಿದೆ.

**ರಾಜಧಾನಿಯಲ್ಲಿ 13 ಸಾವಿರ ಮಂದಿಗೆ ಸೋಂಕು :** ರಾಜಧಾನಿಯಲ್ಲಿ ಕೊರೊನಾ ವೈರಸ್ ಆರ್ಭಟ ಮುಂದುವರೆದಿದೆ. ಭಾನುವಾರ 10 ಸಾವಿರ ಆಸುಪಾಸಿನಲ್ಲಿದ್ದ ಪ್ರಕರಣಗಳು 13 ಸಾವಿರಕ್ಕೆ ಹೆಚ್ಚಳವಾಗಿವೆ. ಗುಣಮುಖರಿಗಿಂತ ಸೋಂಕು ಪ್ರಕರಣಗಳು ಹೆಚ್ಚಳವಾದ ಹಿನ್ನೆಲೆ ಸಕ್ರಿಯ ಪ್ರಕರಣಗಳು 1.14 ಲಕ್ಷಕ್ಕೆ ಹೆಚ್ಚಳವಾಗಿವೆ. ಇಷ್ಟೊಂದು ಸೋಂಕಿತರ ಪತ್ತೆ, ಚಿಕಿತ್ಸೆ ಆರೈಕೆ ಬಿಬಿಎಂಪಿ ಮತ್ತು ಆರೋಗ್ಯ ಇಲಾಖೆಗೆ ಸವಾಲಾಗಿದೆ. ನಗರದಲ್ಲಿ ಆಕ್ಸಿಜನ್, ವೆಂಟಿಲೇಟರ್ ಹಾಸಿಗೆಗೆ ಪರದಾಟ ಮುಂದುವರೆದಿದೆ.

**ತುಮಕೂರಿನಲ್ಲಿ ದಾಖಲೆ ಪ್ರಕರಣ:** ತುಮಕೂರಿನಲ್ಲಿ ಒಂದೇ ದಿನ 1055 ಮಂದಿಗೆ ಸೋಂಕು ತಗುಲಿದ್ದು ಮೊದಲ ಬಾರಿ ಜಿಲ್ಲೆಯೊಂದರಲ್ಲಿ ದಾಖಲೆಯ ಪ್ರಕರಣಗಳು ವರದಿಯಾಗಿವೆ. ಕಲಬುರಗಿ 818 ಪ್ರಕರಣಗಳೊಂದಿಗೆ ಸಾವಿರಕ್ಕೆ ಸಮೀಪಿಸಿದೆ. ಉಳಿದಂತೆ ರಾಜ್ಯದ ಮೂರು ಜಿಲ್ಲೆಗಳಲ್ಲಿ ಮಾತ್ರ ನೂರಕ್ಕೂ ಕಡಿಮೆ ಪ್ರಕರಣಗಳು ಕಾಣಿಸಿಕೊಂಡಿವೆ.

## ಎಷ್ಟು ಸಾವು?

ಬೆಂಗಳೂರು 92, ಬೆಂಗಳೂರು ಗ್ರಾಮಾಂತರ 13, ಕಲಬುರಗಿ ಮತ್ತು ಬೀದರ್ ತಲಾ 7, ಬಳ್ಳಾರಿ 5, ಮೈಸೂರು ತುಮಕೂರು, ಧಾರವಾಡ ತಲಾ 4, ಶಿವಮೊಗ್ಗ, ಮಂಡ್ಯ ತಲಾ 2, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಕೊಡಗು, ಕೋಲಾರ, ರಾಯಚೂರು, ರಾಮನಗರ, ಉಡುಪಿ ಹಾಗೂ ಯಾದಗಿರಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

## ಎಲ್ಲಿ ಹೆಚ್ಚು ಕೇಸ್?

ಬೆಂಗಳೂರಿನಲ್ಲಿ 13782, ತುಮಕೂರು 1055, ಕಲಬುರಗಿ 818, ಮೈಸೂರು 699, ಬೆಂಗಳೂರು ಗ್ರಾಮಾಂತರ 513, ದಕ್ಷಿಣ ಕನ್ನಡ 482, ಮಂಡ್ಯ 413, ಬಳ್ಳಾರಿ 406, ಹಾಸನ 410 ಮಂದಿಗೆ ಸೋಂಕು ತಗುಲಿದೆ.